(SRI H. SIDDAVEERAPPA.)

16. Beechanahalli.
17. Ramaiahnapura.
18. Bommanahalli.
19. Mangala.
20. Mukhalli.

ಶ್ರೀ ಬಿ. ರಾಚಯ್ಯನವರು (ಯಳಂದೂರು ಅನುಸೂಚಿತ ಜಾತಿಗಳು).—14 ಬಾವಿಗಳು ಮಂಜೂರಾಗಿವೆ ಎಂದು ಹೇಳಿದೆ; ಯಾವ ವರ್ಷದಲ್ಲಿ ಮಂಜೂರಾದದ್ದು?

Sri H. SIDDAVEERAPPA.—I want notice.

ಶ್ರೀ ಬಿ. ರಾಚಯ್ಯನವರು.—ಇವೆಲ್ಲಾ ಪೂರ್ತಿ ಯಾಗಿವೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—14 ಬಾವಿಗಳಾಗಿ.

ಶ್ರೀ ಬಿ. ರಾಚಯ್ಯನವರು.—20 ಬಾವಿಗಳ ವಿಷಯ ಇತ್ಯರ್ಥವಾಗದೆ ಉಳಿದಿದೆಯೆಂದು ಹೇಳಿದ್ದೀರಿ: ಇವು ಮಂಜೂರಾಗಿವೆಯೋ ಅಥವಾ ಇಗಲೂ ಮಂಜೂರಾಗದೆ ಹಾಗೆಯೇ ಉಳಿದಿವೆಯೋ?

ಶ್ರೀ ಎಚ್. ಸಿದ್ದವೀರಪ್ಪನವರು.—ಮಂಜೂರಾಗದೆ ಇರುವ ಬಾವಿಗಳು 20.

ಶ್ರೀ ಬಿ. ರಾಚಯ್ಯನವರು.—ಅರೆಪ್ಪಡ, ಮಂಗಳ ಈ ಗ್ರಾಮಗಳಲ್ಲಿ ಬಾವಿಗಳ ಕೆಲಸ ಪೂರ್ತಿಸಿ, ಮೊಬಲಗನ್ನು ಕಂಟ್ರಾಕ್ಟರು ತೆಗೆದುಕೊಂಡಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಈಗ ತಾವು ಹೇಳಿದ ಮೇಲೆ ವಿಚಾರಮಾಡುತ್ತೇವೆ.

ಶ್ರೀ ಬಿ. ರಾಚಯ್ಯನವರು.—ಮಂಜೂರಾಗದೇ ಇರುವುದು ಎಂದು ಹೇಳಿದ್ದೀರಲ್ಲ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ ನನ್ನಲ್ಲಿರ ತಕ್ಕ ಸಮಾಚಾರದ ಮೇಲೆ ಹೇಳಿದೆ.

Purchases for Industrial Concerns.

Q.—219. Sri B. P. NAGARAJA MURTHY (Malavalli).—

Will the Government be pleased to state :—

(*a*) the number of industrial concerns for which they have purchased machineries ;

(*b*) the total amount invested over those purchases ;

(*c*) the commission that they have realised out of those purchases ;

(*d*) whether there are any cases where no commission has been realised ; if so, which are those cases and who were the persons that were responsible in those cases ?

A.—Sri T. SIDDALINGAIYA (Minister for Industries).—

(*a*) The statement showing the purchases made through the Stores Purchase Committee for several industrial concerns during the years 1950-51 and 1951-52 is appended below.

(*b*) Rs. 2,71,814-10-4.

(*c*) Purchases are made on the net prices quoted by the firms. There is no commission given on such purchases.

(*d*) Does not arise in view of reply to clause (*c*).

Sl. Number	Names of the Industrial Concerns	Total amount invested over the purchases made during the years	
		1950-51	1951-52
		Rs. a. p.	Rs. a. p.
1	Industrial Workshop, Bangalore ...	1,250 0 0	...
2	Government Dichromate Factory, Bangalore.	5,750 0 0	...
3	Government Saw Mills, Shimoga ...	532 1 0	...
4	Central Wood Working and Furniture Workshop, Tumkur.	34,098 9 0	...
5	Bhadra Saw Mills, Agasanahadlu ...	3,065 11 0	...
6	Government Electric Factory ...	...	91,381 13 2
7	Do Porcelain Factory ..	...	49,610 0 0
8	Do Soap Factory ...	...	82,996 3 3
9	Sandalwood Oil Factory, Shimoga ...	...	1,437 2 0
10	The Mysore Iron and Steel Works, Bhadravati.	...	1,693 2 8*
	Total ...	44,696 5 3	2,27,118 5 1
	Grand Total	Rs. 2,71,814 10 4	

Sri B. P. NAGARAJA MURTHY.—Will the Government be pleased to state which were the agencies that have made purchases through the Stores Purchase Committee ?

Sri T. SIDDALINGAIYA.—The Stores Purchase Committee makes these purchases by calling for tenders and accepting the lowest, generally, unless for exceptional reasons it may accept any other.

Sri B. P. NAGARAJA MURTHY.—In the cases shown in the statement, were tenders called for ?

Sri T. SIDDALINGAIYA.—Yes.

Sri B. P. NAGARAJA MURTHY.—Will the Government be pleased to state whether purchases were made ex-factory or ex-harbour ?

Sri T. SIDDALINGAIYA.—Notice.

Sri B. P. NAGARAJA MURTHY.—Is it not a fact that the ex-Industries Minister during his foreign tour purchased some machinery ?

Sri T. SIDDALINGAIYA.—Notice.

ಶ್ರೀ ಆರ್. ಅನಂತರಾಮ್ ಅವರು (ಚಾಮರಾಜಪೇಟೆ).—ಕಮಿಷನ್ ಯಾರೂ ಕೊಡುವುದಿಲ್ಲವೆಂದು ಹೇಳಿದ್ದೀರಿ ; ಇನ್ನಾರನ್ನಾದರೂ ಈ ವಿಷಯದಲ್ಲಿ ಕೇಳಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇದರಲ್ಲಿ ಕಮಿಷನ್ ಪ್ರಶ್ನೆಯೇ ಇಲ್ಲ ; 'ನೆಟ್' ಬೆಲೆಗೆ ನಮಗೆ ಕೊಡುತ್ತಾರೆ.

ಶ್ರೀ ಎಂ. ಪಳನಿಯಪ್ಪನ್ ಅವರು (ಅಲಸೂರು).—ಕಾರುಗಳ ಮೇಲೆ ಕಮಿಷನ್ ಕೊಡುವ ಪದ್ಧತಿ ಇಲ್ಲವೆ ?

Sri T. SIDDALINGAIYA.—The question is not clear.

Sri M. PALANIYAPPAN.—Will the Government be pleased to state whether they are paid commission for the cars purchased for the Government ?

*In the case of Mysore Iron and Steel Works, they have their own purchasing department. But orders were placed through Stores Purchase Committee for 50 cycles instrument for power supply on 24th December 1951.

The total value of machinery purchased by the Mysore Iron and Steel Works for the various Development Schemes from 1947 is Rs. 143·68 lakhs.

Sri T. SIDDALINGAIYA.—That question does not arise out of this question, Sir.

ಶ್ರೀ ಆರ್. ಮುನಿಸ್ವಾಮಯ್ಯನವರು (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು). —ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ಬೇಕಾದ ಯಂತ್ರೋಪಕರಣಗಳನ್ನು ಯಾವ ಕಂಪನಿಯಿಂದ ಮತ್ತು ಯಾವ ದೇಶದಿಂದ ತರಿಸಿದ್ದೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗ ಆ ವಿವರಗಳನ್ನು ಹೇಳುವುದಕ್ಕಾಗುವುದಿಲ್ಲ. ಅಲ್ಲೇ ಒಂದು ಪರ್ಚೇಸಿಂಗ್ ಶಾಖೆ ಇದೆ. ಅವರೇ ನೇರವಾಗಿ ಪತ್ರ ವ್ಯವಹಾರ ನಡೆಸಿ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆ. ಎಲ್ಲಿಂದ, ಏನು ಎಂಬ ವಿವರಗಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯನವರು.—ಈಚೆಗೆ ಅಲ್ಲಿಗೆ ತರಿಸಿರುವ ಫರ್ನೇಸ್‌ನಲ್ಲಿ ಬೇಕಾದಷ್ಟು ರಂಧ್ರಗಳಿದ್ದು ಹಳೆಯದಾಗಿದ್ದು ಅದಕ್ಕೆ ಹೊಸದರ ಖರೀದಿ ಕೊಟ್ಟಿದ್ದೀರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿಲ್ಲ ; ವಿಚಾರ ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು (ಶಿವಮೊಗ್ಗ).—ಸ್ಟೋರ್ಸ್ ಪರ್ಚೇಸ್ ಕಮಿಟಿಯವರು ತರಿಸುವ ದರ ಖಾಸಗಿಯಾಗಿ ಸಿಕ್ಕುವ ದರಕ್ಕಿಂತ ಹೆಚ್ಚೆಂಬುದು ಗೊತ್ತಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲವೆಂದು ದೃಢವಾಗಿ ಹೇಳುತ್ತೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಮಾಲೂರು).—ಸ್ಟೋರ್ಸ್ ಪರ್ಚೇಸ್ ಕಮಿಟಿಯವರು ಸಾಮಾನುಗಳನ್ನೊದಗಿಸುವುದಕ್ಕೆ ಸಾವಕಾಶ ಮಾಡುತ್ತಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕೆಲವು ವೇಳೆ ಸಾವಕಾಶವಾದರೆ, ನೇರವಾಗಿ ತರಿಸುವುದಕ್ಕೆ ಅನುಮತಿ ಕೊಡುತ್ತೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಈ ರೀತಿ ಸಾವಕಾಶವಾಗುವುದನ್ನು ಕಡಮೆ ಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹಾಗೆ ಸಾವಕಾಶವಾದರೆ ನೇರವಾಗಿ ತರಿಸಿಕೊಳ್ಳಲು ಅನುಮತಿಕೊಡುತ್ತೇವೆಂದು ಹೇಳಿದ್ದೇನೆ.

Sri H. S. RUDRAPPA (Honnali).—I want to know what your agency is to find out whether the machine is in perfect order either when you place orders or when you purchase it ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ವಿಚಾರಗಳಿಗೆಲ್ಲಾ ಆ ಕಂಪೆನಿಗಳವರೇ ಗ್ಯಾರಂಟಿ ಕೊಡುತ್ತಾರೆ. ಆ ಕಂಪೆನಿಗಳೆಲ್ಲವೂ ಇಂಟರ್ ನ್ಯಾಷನಲ್ ರೆಪ್ಯುಟೇಷನ್ ಇರತಕ್ಕಂಥವುಗಳು. ಅಂಥ ಕಂಪೆನಿಗಳವರಿಂದಲೇ ನಾವೀಗ ಸಾಮಾನುಗಳನ್ನು ಕೊಂಡುಕೊಳ್ಳುತ್ತಿರುವುದು.

ಶ್ರೀ ಹೆಚ್. ಎಸ್. ರುದ್ರಪ್ಪನವರು.—ತಾವು ಕೊಡತಕ್ಕ ಆರ್ಡರ್ಸ್‌ಗಳನ್ನು ಇಂಡಿಯಾ ಹೈಕಮಿಷನರ ಮೂಲಕ ನಡೆಸುತ್ತೀರೋ ಅಥವಾ ತಾವೇ ನೇರವಾಗಿ ಆರ್ಡರ್ಸನ್ನು ಕೊಡುತ್ತೀರೋ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲಿಯವರೆಗೂ ನಾವು ನೇರವಾಗಿಯೇ ಆರ್ಡರ್ಸುಗಳನ್ನು ಕೊಡುತ್ತಾ ಬಂದಿದ್ದೇವೆ.

ಶ್ರೀ ಡಿ. ದೇವರಾಜ ಅರಸು ಅವರು (ಹುಣಸೂರು).—ಸ್ಟೋರ್ಸ್ ಪರ್ಚೇಸ್ ಕಮಿಟಿಯವರು ಇದೇ ನೆಟ್ ಪ್ರೈಸ್ ಎಂದು ಕೋಟ್ ಮಾಡಿದರೆ, ಅದು ನಿಜವಾಗಿಯೂ ನೆಟ್‌ಪ್ರೈಸೇ ಸರಿ ಎಂಬುದನ್ನು ತಾವು ಹೇಗೆ ನಿರ್ಧರಿಸುತ್ತೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಾವು ಹತ್ತಾರು ಕಂಪೆನಿಗಳವರಿಂದ ಕೊಟೇಷನ್‌ಗಳನ್ನು ತರಿಸುತ್ತೇವೆ. ಅವುಗಳನ್ನೆಲ್ಲಾ ತಾಳೆ ಹಾಕಿಕೊಂಡು ನೋಡಿದರೆ ಯಾವುದು ತೀರಾ ಕಡಮೆಯಾಗಿರುತ್ತದೋ ಅಂಥದಕ್ಕೇ ನಾವು ಆರ್ಡರ್ಸ್ ಕೊಡುವುದು. ಇದನ್ನೆಲ್ಲಾ ಆಲೋಚನೆ ಮಾಡಿದನಂತರವೇ ಆ ತೀರ್ಮಾನಕ್ಕೆ ಬರುವುದು.

ಶ್ರೀ ಎಂ. ವಿ. ರಾಮರಾಯರು (ತುಮಕೂರು).—ಭದ್ರಾವತಿ ಉಕ್ಕಿನ ಮತ್ತು ಕಬ್ಬಿಣದ ಕಾರ್ಖಾನೆಗೆ ಅವರಲ್ಲಿರತಕ್ಕ ಒಂದು ಏಜೆನ್ಸಿ ಅಲ್ಲದೆ ಮತ್ತೆ ಬೇರೆ ಯಾವುದಾದರೂ ಏಜೆನ್ಸಿ ಇದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬೇರೆ ಯಾವುದೂ ಇಲ್ಲ.

ಶ್ರೀ ಎಂ. ವಿ. ರಾಮರಾಯರು.—ಹೀಗೆ ಇದಕ್ಕೆ ಏಕೆ ಒಂದು ಪ್ರತ್ಯೇಕವಾದ ಏಜೆನ್ಸಿಯನ್ನು ಕೊಡಲಾಯಿತು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ಸ್ಟೋರ್ಸ್ ಪರ್ಚೇಸ್ ಕಮಿಟಿಯವರು ದೇಶದಲ್ಲಿ ನಾನಾ ಇಲಾಖೆಗಳಿಗೆ ಸ್ವಲ್ಪ ಸ್ವಲ್ಪವಾಗಿ ಬೇಕಾಗತಕ್ಕಂಥ ವಸ್ತುಗಳ ಬಗ್ಗೆ ಆರ್ಡರ್ಸ್ ಕೊಡುವ ಕೆಲಸ ನಡೆಸುತ್ತಿದ್ದಾರೆ. ಆದರೆ ಭದ್ರಾವತಿ ಕಾರ್ಖಾನೆಗೆ ಹೆಚ್ಚಿನ ಪ್ರಮಾಣದಲ್ಲಿ ಸಾಮಾನು ಸಲಕರಣೆಗಳು ಬೇಕಾಗಿರುವುದರಿಂದ ಅದಕ್ಕೆ ಒಂದು ಪ್ರತ್ಯೇಕವಾದ ಏಜೆನ್ಸಿಯನ್ನು ಕೊಡಲಾಗಿದೆ.

ಶ್ರೀ ಎಂ. ವಿ. ರಾಮರಾಯರು.—ಈ ಸ್ಟೋರ್ಸ್ ಪರ್ಚೇಸ್ ಸಮಿತಿಯವರು ಮತ್ತು ಆ ಕಬ್ಬಿಣದ ಕಾರ್ಖಾನೆಯಲ್ಲಿರತಕ್ಕ ಏಜೆನ್ಸಿಯವರು ಆರ್ಡರ್ಸ್ ಕೊಡುತ್ತಿರುವುದು ಎರಡೂ ಒಂದೇ ಆಗಿರುತ್ತವೆಂಬುದನ್ನು ಕಂಡುಹಿಡಿಯತಕ್ಕ ಬಗ್ಗೆ ಈ ಎರಡು ಸಮಿತಿಗಳನ್ನೂ ಸಮ್ಮಿಶ್ರ ಮಾಡಿಕೊಂಡಿರುವಂಥ ಮತ್ತೊಂದು ಏಜೆನ್ಸಿ ಏನಾದರೂ ಇದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆಯಾ ಏಜೆನ್ಸಿಗಳು ಅವುಗಳ ಪಾಡಿಗೆ ಅವು ಕೆಲಸ ಮಾಡಿಕೊಂಡು ಹೋಗುತ್ತಿವೆ. ಈ ಎರಡನ್ನೂ ಅಮಾಲ್ಗಮೇಟ್ ಮಾಡುವಂಥ ಒಂದು ಏಜೆನ್ಸಿ ಇಡತಕ್ಕ ಆವಶ್ಯಕತೆ ಇಲ್ಲ.

ಶ್ರೀ ಎಂ. ವಿ. ರಾಮರಾಯರು.—ಈ ಪ್ರಶ್ನೆಯನ್ನು ತಾವು ಆಲೋಚನೆ ಮಾಡುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಕ್ಕೆ ಅವಕಾಶವೇ ಇಲ್ಲ.

ಶ್ರೀ ವಿ. ಮುನಿಯಪ್ಪನವರು (ಹಿರಿಯೂರು). —ತಾವು ರೂರಲ್ ಡೆವಲಪ್‌ಮೆಂಟ್ ಸಮಿತಿಗಳಿಗೆ ಸರಬರಾಯಿ ಮಾಡಿರತಕ್ಕ ಜನರೇಟರುಗಳು ಈ ಸ್ಟೋರ್ಸ್ ಪರ್ಚೇಸ್ ಕಮಿಟಿಯವರಿಂದಲೇ ಕೊಂಡುಕೊಳ್ಳಲ್ಪಟ್ಟಿರುತ್ತವಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಾವು ಜನರೇಟರ್ಸ್‌ಗಳನ್ನು ಸಪ್ಲೈ ಮಾಡುತ್ತಿಲ್ಲವಲ್ಲ.

ಶ್ರೀ ವಿ. ಮುನಿಯಪ್ಪನವರು. —ಈಗ ಹಾಲರೂರಲ್ ಡೆವಲಪ್‌ಮೆಂಟ್ ಸಮಿತಿಗಳಿಗೆ ಒದಗಿಸಿರತಕ್ಕ ಜನರೇಟರ್ಸ್‌ಗಳನ್ನು ಯಾವ ಏಜನ್ಸಿ ಮೂಲಕ ಖರೀದಿ ಮಾಡಿದ್ದೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಮೋಟಾರ್ ವ್ಯಾನುಗಳಲ್ಲಿ ಇಟ್ಟುಕೊಂಡು ಹೋಗುತ್ತಾರಲ್ಲಾ ಅವುಗಳನ್ನೇನು ? ಅದಕ್ಕೆ ನೋಟೀಸ್ ಬೇಕು.

Sri V. MASIYAPPA.—Has it come to the notice of the Government that those generators are not in proper condition ?

(No answer.)

Construction of the Primary School Building at Sathanur.

Q.—13. Sri S. KARIYAPPA (Virupakshapura).—

Will the Government be pleased to state :—

(*a*) whether the construction of the Primary School Building at Sathnur was sanctioned and entrusted to a contractor ;

(*b*) if so, when ;

(*c*) the stage at which the construction work stands at present ?

A.—Sri A. G. RAMACHANDRA RAO (Minister for Law and Education).—

(*a*) Yes ; it was sanctioned but could not be entrusted to a contractor since the lowest tender amounted to Rs. 12,500 againt the sanctioned amount of Rs. 7,340 and since even this tenderer applied for cancellation of the tender.

(*b*) *Vide* reply to (*a*).

(*c*) It is reported that fresh estimates based on the current schedule rates are called for.

ಶ್ರೀ ಎಸ್. ಕರಿಯಪ್ಪನವರು.—ಈ ಸಾತನೂರು ಪ್ರಾಥಮಿಕಶಾಲಾ ಕಟ್ಟಡ 1937 ನೆಯ ಇಸವಿಯಲ್ಲೇ ಮಂಜೂರಾಯಿತಲ್ಲವೇ ?

Sri A. G. RAMACHANDRA RAO.—My record shows the history from November 1942.

ಶ್ರೀ ಎಸ್. ಕರಿಯಪ್ಪನವರು.—ಹಿಂದೆ ಸರ್ಕಾರದವರು ಪ್ರಾಥಮಿಕಶಾಲಾ ಆಡಳಿತವನ್ನು ಜಿಲ್ಲಾ ಬೋರ್ಡುಗಳಿಗೆ ವಹಿಸಿದ್ದಾಗ ಕೆಲಸಕಾರ್ಯಗಳು ಬೇಗನಡೆಯುವುದಿಲ್ಲವೆಂಬ ಕಾರಣದಿಂದ ತಾನೆ ಮತ್ತೆ ಅವುಗಳನ್ನು ಸರ್ಕಾರಕ್ಕೆ ವಾಪಸ್ಸು ತೆಗೆದುಕೊಂಡದ್ದು ?

Sri A. G. RAMACHANDRA RAO.—Yes.

Supersessions of Lecturers and Assistant Professors in the Mysore University.

Q.—114. Sri S. SRINIVASA IYENGAR (T.-Narsipur).—

Will the Government be pleased to state ;—

(*a*) the number of cases of supersession taken place during the last five years while giving promotions from (i) Lecturership to Assistant Professorship, (ii) Assistant Professorship to Professorship (yearwar statement may kindly be furnished) :

(*b*) (i) whether the University Council had filled up several of these Assistant Professors' posts on a temporary basis commencing from December 1950 ; (ii) and whether they had recommended six months later for their confirmation ; (iii) whether the Government by their order of 8th March 1952, contrary to the recommendations of the University Council passed orders replacing seven temporary Assistant Professors by juniors ; (iv) whether these Assistant Professors are not appointed by Government, juniors in service, pay and with far less academic worth by way of teaching and research ;

(*c*) whether the aggrieved teachers have submitted representations to the Universtiy Authorities for submission to Government ;

(*d*) whether the Vice-Chancellor had returned those representations to the parties inviting reference to Rule 333 of the Manual of General Circulars and Standing Orders, Part I ;

(*e*) whether the Vice-Chancellor has added that the language in the representation was intemperate ;

(*f*) whether the Vice-Chancellor has not violated rules in not forwarding those representations to Government ;

(*g*) whether he has powers to return those representations ?

A.—Sri A. G. RAMACHANDRA RAO (Minister for Law and Education).—

(*a*) Since the appointments to the cadre of Professors and Assistant Professors are by "Selection" and not by automatic promotion as per rules, the question of supersession does not arise.